ತುಮಕೂರು ಡಿಸ್ಟ್ರಿಕ್ಟ್.

ನೋಟಿಫಿಕೇಷ೯.

1896ನೇ ಇಸವಿ ಮೇ ಮಾಹೆ 24ನೇ ತಾರೀಖು.

ಮೈಸೂರು ದೇಶದ ಫಾರೆಸ್ಟ್ಸ್ ಇಲಾಖಾ ಕ೯ಸರ್‌ವೇಟರ್ ಸಾಹೆಬರವರ 1896ನೇ ಇಸವಿ ಮೇ ಮಾಹೆ 16ನೇ ತಾರೀಖಿನ 3845—153ನೇ ನಂಬರ್ ಡಾಕಿಟ್ ಅನುಸರಿಸಿ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮದ್ದಗಿರಿ ತಾಲ್ಲೂಕಿನಲ್ಲಿರುವ ಈ ಕೆಳಗೆ ನಮೂದು ಆಗಿರುವ ಡಿಸ್ಟ್ರಿಕ್ಟ್ ಜಂಗಲ್‌ಗಳು ಇನ್ನೊಂದು ಹುಕುಂ ಕೊಡುವ ಪರಿಯಂತ್ರ ಸಾದೆ, ಮರ ಮುಟ್ಟು ಮುಂತಾದ ಸಾಮಾನುಗಳನ್ನ ಇವುಗಳಲ್ಲಿ ಯಾರೊಬ್ಬರೂ ಕಡಿಯದಂತೆ ಬಂದು ಮಾಡಲ್ಪಟ್ಟಿವೆ.

| ಡಿಸ್ಟ್ರಿಕ್ಟ್ ಜಂಗಲ್ ಇರುವ ಹೋಬ್ಳಿ ಹೆಸರು. | ಡಿಸ್ಟ್ರಿಕ್ಟ್ ಜಂಗಲ್ ಹೆಸರು. |
|---|---|
| ಮದ್ದಗಿರಿ. | (1) ಕಟ್ಟಹಳ್ಳಿ |
| | (2) ಸಿಗ್ಗಬೆಟ್ಟ |
| | (3) ಕನಗೊಂಡಬೆಟ್ಟ |
| | (4) ಹೊಸಹಳ್ಳಿ |
| | (5) ತಾಯಿಗೊಂಡನಹಳ್ಳಿ |
| | (6) ಗುರ್ರಮ್ಮನಹಳ್ಳಿ |
| | (7) ಚಿನಕವಜ್ಜ |

ಎಂ. ವೆಂಕಟನಾರಣಪ್ಪ,
ಡಿ|| ಫಾರೆಸ್ಟ್ ಆಫಿಸರ್.

---

ತಾರೀಖು 2ನೇ ಜೂ೯ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ೯ 1896—97ನೇ ಸಾಲಿಗೆ ಅಂದರೆ ಸ೯ 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸ೯ 1897ನೇ ಇಸವಿ ಜೂ೯ 30ನೇ ತಾರೀಖು ವರಿಗೆ ಬಾಜೂದಲ್ಲಿ ಕಂಡ ಗುಬ್ಬೀ ತಾಲ್ಲೂಕು ಗ್ರಾಮಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಅಕಾರ ಕಂಡ ಸರಕಾರಿ ಬಂಜರು ಜಮೀನುಗಳಲ್ಲಿಯೂ ಮತ್ತು ಬಾಜೂದಲ್ಲಿ ಕಂಡ ಅವ್ಯತಮಹಲ್ ಕಾವಲುಗಳಲ್ಲಿಯೂ ದೊರಿಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸುಗಳನ್ನ ಜವಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್‌ದಾರ್ರವರ ರೂಬರೂ 1896ನೇ ಇಸವಿ ಜುಲೈ ತಾರೀಖು 8ರಲ್ಲು ಗುಬ್ಬೀ ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮಾಡಲ್ಪಡುತ್ತೆ. ಹರಾಜು ಮಧ್ಯಾನ್ನ 12 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್‌ರವರ ಮಂಜೂರಾತಿಗೆ ವಳಪಟ್ಟಿರುತ್ತೆ.

(1) ಹಾಗಲವಾಡಿ ಸಮ್ಮತು ಹರಳಕೆರೆ ನಾಯಕನಕೆರೆ ವಗ್ಯೆರೆ
(2) ಹಾಗಲವಾಡಿ ಸಮ್ಮತು ಮಂಜಲಧೊರೆಫಿರ್ಕಾ ಗ್ರಾಮಗಳು
(3) ಚಿಟ್ಟನಹಳ್ಳಿ ಸಮ್ಮತು ಹರಳಕೆರೆ ವಗ್ಯೆರೆ ಗ್ರಾಮಗಳು
(4) ನಿಟ್ಟೂರು ಸಮ್ಮತು ಕೊಂಡ್ಲಿ ಫಿರಕಾ ಕರಡಿಕಲ್ಲು ವಗ್ಯೆರೆ ಗ್ರಾಮಗಳು
(5) ಜೇಳೂರು ಸಮ್ಮತು ಹುವ್ವಿನ ಕಟ್ಟನಲ್ಲಿರುವ ವಗ್ಯೆರೆ ಗ್ರಾಮಗಳು

ಅವ್ಯತಮಹಲ್ ಕಾವಲುಗಳು.

(1) ಗುಬ್ಬೀ ಸಮ್ಮತು ಬಿಕ್ಕೆಗುಡ್ಡದ ಕಾವಲು
(2) ಡಿಟೋ ಬಸ್ತಿಕಟ್ಟೆ ಕಾವಲು
(3) ಡಿಟೋ ಗುಬ್ಬೀ ಅಮಾನೀಕೆರೆ ವಳಗೆರೆ ಕಾವಲು
(4) ಡಿಟೋ ಚಿಟ್ಟನಹಳ್ಳಿ ಸಮ್ಮತು ನಾಗೇಗವ್ವಡನಬ್ಯಾಲ ಕೆಂಜಿಗವ್ವಡನ ಬ್ಯಾಲ
(5) ಡಿಟೋ ಹಿಂಡಿಸಿಗೆರೆ ಕಾವಲು
(6) ಡಿಟೋ ಚಿಟ್ಟನಹಳ್ಳಿ ವಳಗೆರೆ ಕಾವಲು
(7) ಡಿಟೋ ಕಾಡಾಲದ ಗಿಡದ ಕಾವಲು
(8) ಡಿಟೋ ಇಡಗೂರುಕೆರೆ ಹಿಂದಣ ಕಗ್ಗಲಿ ಕಾವಲು
(9) ಹಾಗಲವಾಡಿ ಸಮ್ಮತು ಯರೆ ಕಾವಲು
(10) ಕಲ್ಲೂರು ಮಾಗಣಿ ಬಸವನಾಗರದ ಕಾವಲು
(11) ಡಿಟೋ ಕಲ್ಲೂರುಕೆರೆ ಹಿಂದಣ ಜಾಲಿ ಕಾವಲು
(12) ನಿಟ್ಟೂರು ಮಾಗಣಿ ಬಿದರಹಳ್ಳಿ ಕಾವಲು
(13) ಡಿಟೋ ಈಚಲು ಕಾವಲು
(14) ದಂಡಿನಶಿವರದ ಮಾಗಣಿ ನಾರಿಗೆಹಳ್ಳಿಕೆರೆ ಕಾವಲು
(15) ಕಡಬ ಮಾಗಣಿ ಕಡಬ ವಳಗೆರೆ ಕಾವಲು
(16) ಜೇಳೂರು ಮಾಗಣಿ

| | | |
|---|---|---|
| (1) ಅಳಲೇಕಾಯಿ | (4) ಕಪಿಲಾರಂಗು | (7) ಗೇರುಬೀಜ |
| (2) ತಾರೇಕಾಯಿ | (5) ಪತಂಗ | (8) ಆವರಿಕೆ ಗೋಂದು |
| (3) ದಿಂಡಗದಗೋಂದು | (6) ಹೊಂಗೇಬೀಜ | (9) ಬ್ಯಾಲದಹಣ್ಣು ಮುಂತಾದ್ದು |

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟು ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟು ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.